# ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ನಡವಳಿಗಳು.

**ವಿಷಯ:** 2023-24 ನೇ ಸಾಲಿಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳಿಗೆ ಫೆಬ್ರುವರಿ- 2024 ಮತ್ತು ಮಾರ್ಚ್ - 2024 ರ ವರೆಗಿನ ಅವಧಿಗೆ ನಾಲ್ಕನೇ ಕಂತಿನ ಗೌರವಧನ ಬಿಡುಗಡೆಗೊಳಿಸುವ ಕುರಿತು.

**ಓದಲಾಗಿದೆ:** 1. 2023-24 ನೇ ಸಾಲಿನ ಆಯವ್ಯಯದನ್ವಯ ಆರ್ಥಿಕ ಇಲಾಖೆಯು ನಿಗದಿಪಡಿಸಿದಂತೆ.

2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 126 ಜಿಪಸ 2022, ದಿನಾಂಕ:18.12.2022.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ(1 )ರಂತೆ, 2023-24 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ: 2515-00-198-1-11-300ರಡಿ ₹.27378.24 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(2)ರ ಸರ್ಕಾರಿ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರುಗಳಿಗೆ ಪ್ರತಿ ಮಾಹೆಯಾನ ₹.6000/-ಗಳು, ಉಪಾಧ್ಯಕ್ಷರುಗಳಿಗೆ ₹.4000/- ಗಳು ಹಾಗೂ ಸದಸ್ಯರುಗಳಿಗೆ ₹.2000/-ಗಳ ಗೌರವಧನ ನಿಗದಿಪಡಿಸಲಾಗಿದೆ.

ಅದರಂತೆ, ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳಿಗೆ ಫೆಬ್ರುವರಿ- 2024 ಮತ್ತು ಮಾರ್ಚ್ - 2024 ರ ವರೆಗಿನ ಅವಧಿಗೆ ನಾಲ್ಕನೇ ಕಂತಿನ ಗೌರವಧನವನ್ನು 2023-24ನೇ ಸಾಲಿಗೆ ಲೆಕ್ಕ ಶೀರ್ಷಿಕೆ: 2515-00-198-1-11-300ರಡಿ ಒದಗಿಸಲಾದ ಅನುದಾನದಲ್ಲಿ ₹ **44,66,76,000**/-ಗಳನ್ನು ಅನುಬಂಧದನ್ವಯ ನಿಗದಿಪಡಿಸಲಾಗಿರುವಂತೆ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿರುತ್ತದೆ.

ಅದರಂತೆ, ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಕಪಂರಾಆ/ಅಭಿವೃದ್ಧಿ/304/ಸ.ಗೌ.ಧ/2023, ಬೆಂಗಳೂರು ದಿನಾಂಕ:28.02.2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2023-24ನೇ ಸಾಲಿಗೆ ಆರ್ಥಿಕ ವರ್ಷದ ಫೆಬ್ರುವರಿ- 2024 ಮತ್ತು ಮಾರ್ಚ್ - 2024 'ರವರೆಗಿನ ಅವಧಿಗೆ ಮಾತ್ರ ಅನ್ವಯಿಸುವಂತೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳಾದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಲೆಕ್ಕ ಶೀರ್ಷಿಕೆ: 2515-00-198-1-11-300ರಡಿ ಲಭ್ಯವಿರುವ ₹ 27378.24 ಲಕ್ಷಗಳ ಅನುದಾನದಲ್ಲಿ ₹ **44,66,76,000**/- (ರೂ. ನಲವತ್ತನಾಲ್ಕು ಕೋಟಿ ಅರವತ್ತಾರು ಲಕ್ಷದ ಎಪ್ಪತ್ತಾರು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಜಿಲ್ಲಾ ಪಂಚಾಯಿತಿಗಳ ಡಿ.ಡಿ.ಓ ಕೋಡ್‌ಗಳಿಗೆ ಖಜಾನೆ-2 ರ ಮೂಲಕ ಬಿಡುಗಡೆಗೊಳಿಸಲು ಆರ್ಥಿಕ ಅಧಿಕಾರಿ, ಲೆಕ್ಕಪತ್ರ ಶಾಖೆ, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಇವರಿಗೆ ಆದೇಶಿಸಿದೆ.

ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ ಬಿಡುಗಡೆಗೊಳಿಸಿರುವ ಮಾಸಿಕ ಗೌರವಧನದ ಜಿಲ್ಲಾವಾರು ಮೊತ್ತಗಳನ್ನು ಈ ಆದೇಶದೊಂದಿಗೆ ಲಗತ್ತಿಸಿದ ಅನುಬಂಧದಲ್ಲಿ ನೀಡಿದೆ. ಜಿಲ್ಲಾವಾರು ಗೌರವ ಧನದ ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಡಿ.ಡಿ.ಓ (ಖಜಾನೆ-2ರ ಡ್ರಾಯಿಂಗ್ ಅಂಡ್ ಡಿಸ್ಬರ್ಸಿಂಗ್ ಕೋಡ್ - ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಕೋಡ್)ಕೋಡ್‌ಗಳಿಗೆ ಖಜಾನೆ-2 ತಂತ್ರಾಂಶದ ಮೂಲಕ ಅಪ್‌ಲೋಡ್ ಮಾಡಲು ಆದೇಶಿಸಿದೆ.

**ಮಾಸಿಕ ಗೌರವಧನದ ಮೊತ್ತಗಳನ್ನು ಚುನಾಯಿತ ಪ್ರತಿನಿಧಿಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಪಾವತಿಸುವುದು.**

1. ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವ ಆಯಾ ಜಿಲ್ಲೆಗಳ ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಡಿ.ಡಿ.ಓ(ಖಜಾನೆ-2ನ ಡ್ರಾಯಿಂಗ್ ಅಂಡ್ ಡಿಸ್ಬರ್ಸಿಂಗ್ ಕೋಡ್)ಗಳಿಗೆ ಅಪ್‌ಲೋಡ್ ಮಾಡಿರುವುದರಿಂದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಖಜಾನೆಯಿಂದ ತಮ್ಮ ಮೊತ್ತಗಳನ್ನು ಸೆಳೆಯುವುದು.

2. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳ ಸಂಖ್ಯೆಗಳನ್ನು ನಿಖರವಾಗಿ ಗಣನೆಗೆ ತೆಗೆದುಕೊಂಡು ಪ್ರತಿ ಗ್ರಾಮ ಪಂಚಾಯತಿಗೆ ನೀಡಬೇಕಾಗಿರುವ ಮೊತ್ತಗಳನ್ನು ಲೆಕ್ಕಹಾಕಿ ಅಂತಹ ಮೊತ್ತಗಳನ್ನು ಗ್ರಾಮ ಪಂಚಾಯತಿಗಳ ಬ್ಯಾಂಕ್ ಉಳಿತಾಯ ಖಾತೆಗಳಿಗೆ ಆರ್.ಟಿ.ಜಿ.ಎಸ್/ ಎನ್.ಇ.ಎಫ್.ಟಿ ವಿಧಾನದ ಮೂಲಕ ವರ್ಗಾಯಿಸಿ ಒಂದು ವಾರದ ಒಳಗಾಗಿ ಚುನಾಯಿತ ಪ್ರತಿನಿಧಿಗಳಿಗೆ ಮಾಸಿಕ ಗೌರವಧನ ಪಾವತಿಸಲು ಸೂಚನೆಗಳನ್ನು ನೀಡುವುದು.
3. ಈ ಆದೇಶದ ಮೂಲಕ ಬಿಡುಗಡೆಗೊಳಿಸಿದ ಮೊತ್ತಗಳನ್ನು ಗ್ರಾಮ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳಿಗೆ ಫೆಬ್ರವರಿ- 2024 ಮತ್ತು ಮಾರ್ಚ್ - 2024 ರವರೆಗಿನ ಗೌರವಧನ ಪಾವತಿಸಲು ಮಾತ್ರ ವಿನಿಯೋಗಿಸುವುದು. ಅನ್ಯ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದಲ್ಲ.
4. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯತಿಗಳಿಗೆ, **ಜಿಲ್ಲಾ ಪಂಚಾಯತಿ ಖಾತೆಗೆ ಅನುದಾನ ಜಮೆಯಾದ ದಿನಾಂಕದಿಂದ 07 ದಿನಗಳೊಳಗೆ ಮರುಬಿಡುಗಡೆಗೊಳಿಸಲು** ಕ್ರಮವಹಿಸುವುದು. ಅನುಷ್ಠಾನಾಧಿಕಾರಿಗಳ ಹಂತದಲ್ಲಿ ಗೌರವಧನ ವಿಳಂಬವಾಗಿ ಬಿಡುಗಡೆಗೊಳಿಸಿದಲ್ಲಿ, ಗ್ರಾಮ ಪಂಚಾಯತಿಗಳಿಗೆ ಬಡ್ಡಿಯೊಂದಿಗೆ ಪಾವತಿಸತಕ್ಕದ್ದು ಹಾಗೂ ಕ್ಲುಪ್ತ ಅವಧಿಯೊಳಗೆ ಗೌರವಧನ ಬಿಡುಗಡೆಗೊಳಿಸದಿದ್ದಲ್ಲಿ ವಿಳಂಬಗೊಳಿಸಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು.
5. ನಿಗಧಿತ ಅವಧಿಯೊಳಗೆ ಗೌರವಧನ ಬಿಡುಗಡೆಗೊಳಿಸಿರುವ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸುವುದು ಹಾಗೂ ಗೌರವಧನದ ಅನುದಾನವು Scale based budget ಆಗಿರುವುದರಿಂದ ಆಯಾ ವರ್ಷದ ಅನುದಾನವನ್ನು ಆಯಾ ವರ್ಷದಲ್ಲಿಯೇ ವಿನಿಯೋಗಿಸಬೇಕಾಗಿದ್ದು, ಸದರಿ ಆರ್ಥಿಕ ಸಾಲಿನಲ್ಲಿ ಬಿಡುಗಡೆಯಾದ ಗೌರವಧನಕ್ಕೆ ಸಂಬಂಧಿತ ಯಾವುದೇ ವಿಚಾರಣೆಗಳಿದ್ದಲ್ಲಿ ಬಿಡುಗಡೆಗೊಳಿಸಿದ 15 ದಿನಗಳೊಳಗಾಗಿ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ :FD 14 TFP 2023 ದಿನಾಂಕ: 21.11.2023 ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿರುವಂತೆ ಹೊರಡಿಸಲಾಗಿದೆ.

**(ಸ.ಅ.ಮು.ಕಾ (ಪಂ.ರಾಜ್), ಗ್ರಾ.ಅ & ಪಂ.ರಾ ಇಲಾಖೆ ರವರಿಂದ ಅನುಮೋದಿಸಲ್ಪಟ್ಟಿದೆ).**

ನಿರ್ದೇಶಕರು (ಅಭಿವೃದ್ಧಿ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ**

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398), ಶೇಷಾದ್ರಿಪುರ, ಅಂಬೇಡ್ಕರ್ ವೀಧಿ, ಬೆಂಗಳೂರು..
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
4. ನಿರ್ದೇಶಕರು(ಅಭಿವೃದ್ಧಿ), ಕರ್ನಾಟಕ ಪಂಚಾಯತ್‌ರಾಜ್ ಆಯುಕ್ತಾಲಯ, ಬೆಂಗಳೂರು
5. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ (TNMC), ಖನಿಜ ಭವನ, ಬೆಂಗಳೂರು.
6. ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲೆಗಳು.
7. ವಿಶೇಷಾಧಿಕಾರಿ, ಆರ್ಥಿಕ ಇಲಾಖೆ (ವೆಚ್ಚ-6), ವಿಧಾನ ಸೌಧ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

9. ಆರ್ಥಿಕ ಅಧಿಕಾರಿ, ಲೆಕ್ಕಪತ್ರ ಶಾಖೆ, ಕರ್ನಾಟಕ ಪಂಚಾಯತ್‌ರಾಜ್ ಆಯುಕ್ತಾಲಯ, ಬೆಂಗಳೂರು
10. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು - (ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
11. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಆಯಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
12. ಗಣಕ ಕೋಶ - ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು
13. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ ಮಾಸ ಪತ್ರಿಕೆ – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ಪಂಚಾಯತ್‌ರಾಜ್ ಆಯುಕ್ತಾಲಯ ರವರ ಆಪ್ತ ಸಹಾಯಕರು ಬೆಂಗಳೂರು.
4. ಶಾಖಾ ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

**ಆದೇಶ ಸಂಖ್ಯೆ: ಕಪಂರಾಆ/ಅಭಿವೃದ್ಧಿ/304/ಸ.ಗೌ.ಧ/2023, ಬೆಂಗಳೂರು ದಿನಾಂಕ:28.02.2024**

## ಅನುಬಂಧ

### ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಫೆಬ್ರವರಿ- 2024 ಮತ್ತು ಮಾರ್ಚ್ - 2024 ರವರೆಗೆ ಗೌರವಧನ ಪಾವತಿ ವಿವರ

| ಕ್ರ ಸಂ | ಜಿಲ್ಲೆಯ ಹೆಸರು | ಗ್ರಾ.ಪಂಗಳ ಒಟ್ಟು ಸಂಖ್ಯೆ | ಅಧ್ಯಕ್ಷರು | ಉಪಾಧ್ಯಕ್ಷರು | ಸದಸ್ಯರು | ಒಟ್ಟು ₹ ಗಳಲ್ಲಿ | ಡಿ.ಡಿ.ಓ ಕೋಡ್ |
|---|---|---|---|---|---|---|---|
| 1 | ಬಾಗಲಕೋಟೆ | 195 | 190 | 190 | 2778 | 1,49,12,000 | 27979O |
| 2 | ಬಳ್ಳಾರಿ | 100 | 100 | 100 | 1777 | 91,08,000 | 27991D |
| 3 | ಬೆಳಗಾವಿ | 500 | 500 | 500 | 7515 | 4,00,60,000 | 27967D |
| 4 | ಬೆಂಗಳೂರು(ಗ್ರಾಮಾಂತರ) | 101 | 101 | 101 | 1603 | 84,32,000 | 27975D |
| 5 | ಬೆಂಗಳೂರು ನಗರ | 86 | 84 | 84 | 1833 | 90,12,000 | 27980D |
| 6 | ಬೀದರ್ | 185 | 185 | 185 | 2887 | 1,52,48,000 | 33467O |
| 7 | ಚಾಮರಾಜನಗರ | 130 | 130 | 130 | 1903 | 1,02,12,000 | 27995D |
| 8 | ಚಿಕ್ಕಬಳ್ಳಾಪುರ | 157 | 157 | 157 | 2199 | 1,19,36,000 | 27994D |
| 9 | ಚಿಕ್ಕಮಗಳೂರು | 226 | 226 | 226 | 1875 | 1,20,20,000 | 27986O |
| 10 | ಚಿತ್ರದುರ್ಗ | 189 | 189 | 189 | 3041 | 1,59,44,000 | 27981O |
| 11 | ದಕ್ಷಿಣ ಕನ್ನಡ | 223 | 223 | 223 | 2843 | 1,58,32,000 | 27987D |
| 12 | ದಾವಣಗೆರೆ | 194 | 193 | 193 | 2253 | 1,28,92,000 | 27977D |
| 13 | ಧಾರವಾಡ | 145 | 143 | 143 | 1757 | 98,88,000 | 33320O |
| 14 | ಗದಗ | 122 | 122 | 122 | 1525 | 85,40,000 | 27972O |
| 15 | ಹಾಸನ | 264 | 256 | 256 | 3006 | 1,71,44,000 | 27976D |
| 16 | ಹಾವೇರಿ | 223 | 223 | 223 | 2718 | 1,53,32,000 | 27973D |
| 17 | ಕಲ್ಬುರ್ಗಿ | 261 | 258 | 258 | 3968 | 2,10,32,000 | 33465D |
| 18 | ಕೊಡಗು | 103 | 103 | 103 | 1026 | 61,64,000 | 27988D |
| 19 | ಕೋಲಾರ | 154 | 151 | 151 | 2419 | 1,26,96,000 | 27982O |
| 20 | ಕೊಪ್ಪಳ | 153 | 153 | 153 | 2453 | 1,28,72,000 | 27966D |
| 21 | ಮಂಡ್ಯ | 233 | 233 | 233 | 3383 | 1,81,92,000 | 27989D |
| 22 | ಮೈಸೂರು | 256 | 250 | 250 | 3732 | 1,99,28,000 | 27985D |
| 23 | ರಾಯಚೂರು | 179 | 174 | 174 | 3139 | 1,60,36,000 | 27992O |
| 24 | ರಾಮನಗರ | 126 | 122 | 122 | 1701 | 92,44,000 | 27993D |
| 25 | ಶಿವಮೊಗ್ಗ | 254 | 251 | 251 | 2195 | 1,38,00,000 | 27983D |
| 26 | ತುಮಕೂರು | 330 | 330 | 330 | 4705 | 2,54,20,000 | 27984D |
| 27 | ಉಡುಪಿ | 155 | 153 | 154 | 2086 | 1,14,12,000 | 27978D |
| 28 | ಉತ್ತರಕನ್ನಡ | 227 | 227 | 226 | 2210 | 1,33,72,000 | 27974D |
| 29 | ವಿಜಯನಗರ | 137 | 136 | 136 | 2137 | 1,12,68,000 | 19667O |
| 30 | ವಿಜಯಪುರ | 211 | 204 | 202 | 3470 | 1,79,44,000 | 27990D |
| 31 | ಯಾದಗಿರಿ | 122 | 122 | 122 | 2086 | 1,07,84,000 | 33466D |
| | **ಒಟ್ಟು** | **5941** | **5889** | **5,887** | **82228** | **44,66,76,000** | |

ನಿರ್ದೇಶಕರು (ಅಭಿವೃದ್ಧಿ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು